جمعية خدمة المحتوى
الإسلامي باللغات

# ಇಸ್ಲಾಮ್
# ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ

ಕನ್ನಡ | كنادي | الإِسْلَامُ دِينُ الفِطْرَةِ وَالعَقْلِ وَالسَّعَادَةِ

ವಿಭಿನ್ನ ಭಾಷೆಗಳಲ್ಲಿ ಇಸ್ಲಾಮೀ ವಿಷಯಗಳ ಸೇವಾ
ಸಂಘದ ವೈಜ್ಞಾನಿಕ ಸಮಿತಿ

الإِسْلَامُ

دِينُ الفِطْرَةِ وَالعَقْلِ وَالسَّعَادَةِ

# ಇಸ್ಲಾಮ್
# ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ


اللَّجْنَةُ العِلْمِيَّةُ

بِجَمْعِيَّةِ خِدْمَةِ المُحْتَوَى الإِسْلَامِيِّ بِاللُّغَاتِ

ವಿಭಿನ್ನ ಭಾಷೆಗಳಲ್ಲಿ ಇಸ್ಲಾಮೀ ವಿಷಯಗಳ ಸೇವಾ ಸಂಘದ

ವೈಜ್ಞಾನಿಕ ಸಮಿತಿ

بِسْمِ اللهِ الرَّحمَنِ الرَّحِيمِ

# ಇಸ್ಲಾಮ್

# ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ನೀವು ಸ್ವತಃ ನಿಮ್ಮನ್ನು ಪ್ರಶ್ನಿಸಿದ್ದೀರಾ:

ಆಕಾಶಗಳು ಮತ್ತು ಭೂಮಿ ಹಾಗು ಅವುಗಳ ಮಧ್ಯೆ ಇರುವ ಮಹಾನ್ ಸೃಷ್ಟಿಗಳ ಸೃಷ್ಟಿಕರ್ತ ಯಾರು? ಮತ್ತು ಈ ನಿಖರವಾದ ವ್ಯವಸ್ಥೆಯನ್ನು ರಚಿಸಿದವರು ಯಾರು?

ಈ ಮಹಾನ್ ಪ್ರಪಂಚವು ನಿಖರವಾಗಿ ನಿಯಂತ್ರಿಸುವ ತನ್ನ ನಿಯಮಗಳೊಂದಿಗೆ ಇಷ್ಟು ವರ್ಷಗಳವರೆಗೆ ಕ್ರಮಬದ್ಧವಾಗಿ ಮತ್ತು ಸ್ಥಿರವಾಗಿ ಹೇಗೆ ನಡೆಯುತ್ತಿದೆ?

ಈ ಜಗತ್ತು ತನ್ನಷ್ಟಕ್ಕೆ ತಾನೇ ಸೃಷ್ಟಿಯಾಗಿದೆಯೇ? ಅಥವಾ ಶೂನ್ಯದಿಂದ ಅಸ್ತಿತ್ವಕ್ಕೆ ಬಂದಿದೆಯೇ? ಅಥವಾ ಎಲ್ಲವೂ ಆಕಸ್ಮಿಕವಾಗಿ ಸಂಭವಿಸಿದೆಯೇ?

## ನಿಮ್ಮನ್ನು ಸೃಷ್ಟಿಸಿದವರು ಯಾರು?

ನಿಮ್ಮ ದೇಹದ ಅಂಗಗಳಲ್ಲಿ ಮತ್ತು ಸಜೀವಿಗಳ ದೇಹಗಳಲ್ಲಿ ಈ ಸೂಕ್ಷ್ಮ ವ್ಯವಸ್ಥೆಯನ್ನು ರಚಿಸಿದರು ಯಾರು?

ಈ ಕಟ್ಟಡವನ್ನು ಯಾರೂ ರಚಿಸದೆ ಸ್ವಂತವಾಗಿ

ಅಸ್ತಿತ್ವಕ್ಕೆ ಬಂದಿದೆ ಅಥವಾ ಶೂನ್ಯವು ಈ ಕಟ್ಟಡವನ್ನು ಅಸ್ತಿತ್ವಕ್ಕೆ ತಂದಿದೆ ಎಂದು ಯಾವುದೇ ಬುದ್ಧಿವಂತ ವ್ಯಕ್ತಿಗೆ ಹೇಳಿದರೆ ಎಂದಿಗೂ ಅವನು ಈ ಮಾತನ್ನು ಸ್ವೀಕರಿಸಲಾರನು. ಈ ಸ್ಥಿತಿಯಲ್ಲಿ ಈ ವಿಶಾಲ ಜಗತ್ತು ಯಾವುದೇ ಸೃಷ್ಟಿಕರ್ತನಿಲ್ಲದೆ ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳುವರ ಮಾತನ್ನು ಅವನು ಹೇಗೆ ಸ್ವೀಕರಿಸಬಲ್ಲ. ಜಗತ್ತಿನ ನಿಖರವಾದ ಈ ವ್ಯವಸ್ಥೆ ಆಕಸ್ಮಿಕವಾಗಿ ಅಸ್ಥಿತ್ವಕ್ಕೆ ಬಂದಿದೆ ಎಂದು ಓರ್ವ ಬುದ್ಧಿವಂತ ವ್ಯಕ್ತಿಗೆ ಹೇಳಿದರೆ ಅವನು ಇದನ್ನು ಹೇಗೆ ಸ್ವೀಕರಿಸಲಿಕ್ಕೆ ಸಾಧ್ಯ?

ನಿಸ್ಸಂಶಯವಾಗಿ, ಈ ದಿಗಂತ ಮಂಡಲದ ಮತ್ತು ಅದರಲ್ಲಿರುವ ವಸ್ತುಗಳ ಆರಾಧ್ಯ, ಸೃಷ್ಟಿಕರ್ತ, ನಿಯಂತ್ರಕ ಮತ್ತು ಜಗದೊಡೆಯನು ಒಬ್ಬನಿದ್ದಾನೆ. ಆತನೇ ಸರ್ವಶಕ್ತ ಅಲ್ಲಾಹು.

ಸರ್ವಶಕ್ತ ಅಲ್ಲಾಹು ನಮ್ಮ ಕಡೆಗೆ ಅನೇಕ ಸಂದೇಶವಾಹಕರನ್ನು ಕಳುಹಿಸಿದನು ಮತ್ತು ಅವರ ಮೇಲೆ ದಿವ್ಯ ಗ್ರಂಥಗಳನ್ನು ಇಳಿಸಿದನು. ಅಂತಿಮ ದಿವ್ಯ ಗ್ರಂಥವೆಂದರೆ ಪವಿತ್ರ ಕುರ್‌ಆನ್, ಅದು ಕೊನೆಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಅವರ ಮೇಲೆ ಇಳಿಸಲ್ಪಟ್ಟಿದೆ. ಈ ಸಂದೇಶವಾಹಕರ ಮತ್ತು ಗ್ರಂಥಗಳ ಮೂಲಕ ಅಲ್ಲಾಹು:

ಅವನು (ಅಲ್ಲಾಹು) ತನ್ನ ಅಸ್ತಿತ್ವ, ತನ್ನ ಗುಣಗಳ ಬಗ್ಗೆ, ನಮ್ಮ ಮೇಲೆ ಅವನ ಹಕ್ಕುಗಳ ಬಗ್ಗೆ ಮತ್ತು

ಅವನ ಮೇಲೆ ನಮ್ಮ ಹಕ್ಕುಗಳ ಬಗ್ಗೆ ನಮಗೆ ತಿಳಿಸಿದನು.

- ಅವನು (ಅಲ್ಲಾಹು) ನಮಗೆ ತಿಳಿಸಿರುವುದೇನೆಂದರೆ — ಅವನೇ ಸಕಲ ಸೃಷ್ಟಿಗಳನ್ನು ಸೃಷ್ಟಿಸಿದ ರಬ್. ಅವನು ಚಿರಂತನನು ಅವನಿಗೆ ಎಂದಿಗೂ ಮರಣವಿಲ್ಲ. ಸಂಪೂರ್ಣ ಸೃಷ್ಟಿಗಳೆಲ್ಲವೂ ಅವನ ವಶದಲ್ಲೂ, ಅವನ ಸ್ವಾಧೀನದಲ್ಲೂ ಅವನ ನಿಯಂತ್ರಣದಲ್ಲೂ ಇವೆ.

ಅವನ (ಅಲ್ಲಾಹುವಿನ) ಗುಣಗಳಲ್ಲಿ ಒಂದು ಮಹತ್ವದ ಗುಣ 'ಜ್ಞಾನ'ವಾಗಿದೆ. ಅವನ ಜ್ಞಾನವು ಎಲ್ಲವನ್ನೂ ಆವರಿಸಿಕೊಂಡಿದೆ. ಅವನು ಎಲ್ಲವನ್ನೂ ಕೇಳುವವನೂ, ಎಲ್ಲವನ್ನೂ ನೋಡುವವನೂ ಆಗಿದ್ದಾನೆ. ಭೂಮಿಯಲ್ಲಾಗಲಿ ಅಥವಾ ಆಕಾಶದಲ್ಲಾಗಲಿ, ಯಾವುದೇ ವಿಷಯವೂ ಅವನಿಂದ ಅಡಗಿಹೋಗುವುದಿಲ್ಲ.

ಮಹೋನ್ನತ ರಬ್ಬ್ ಚಿರಂತನನಾಗಿದ್ದು, ಪ್ರತಿಯೊಂದು ಸೃಷ್ಟಿಯ ಜೀವವು ಅವನೊಬ್ಬನಿಂದಲೇ ಅಸ್ತಿತ್ವಕ್ಕೆ ಬಂದಿದೆ. ಅವನೇ ಸಕಲ ನಿಯಂತ್ರಕನು, ಎಲ್ಲ ಸೃಷ್ಟಿಗಳ ಬದುಕು ಅವನಿಂದಲೇ ನೆಲೆನಿಂತಿರುತ್ತದೆ. ಸರ್ವಶಕ್ತ ಅಲ್ಲಾಹು ಹೇಳುತ್ತಾನೆ :

﴿اللَّهُ لَا إِلَٰهَ إِلَّا هُوَ الْحَيُّ الْقَيُّومُ لَا تَأْخُذُهُ سِنَةٌ وَلَا نَوْمٌ لَهُ مَا فِي السَّمَاوَاتِ وَمَا فِي الْأَرْضِ مَنْ ذَا الَّذِي يَشْفَعُ عِنْدَهُ إِلَّا بِإِذْنِهِ يَعْلَمُ مَا بَيْنَ أَيْدِيهِمْ وَمَا خَلْفَهُمْ وَلَا

يُحِيطُونَ بِشَيْءٍ مِنْ عِلْمِهِ إِلَّا بِمَا شَاءَ وَسِعَ كُرْسِيُّهُ السَّمَوَاتِ وَالأَرْضَ وَلَا يَئُودُهُ حِفْظُهُمَا وَهُوَ الْعَلِيُّ الْعَظِيمُ ﴿٢٥٥﴾

ಅಲ್ಲಾಹು! ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಎಂದೆಂದಿಗೂ ಜೀವಿಸಿರುವವನೂ ಎಲ್ಲವನ್ನೂ ನಿಯಂತ್ರಿಸುವವನೂ ಆಗಿರುವನು. ತೂಕಡಿಕೆಯಾಗಲಿ, ನಿದ್ರೆಯಾಗಲಿ ಅವನನ್ನು ಬಾಧಿಸದು. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ. ಅವನ ಅನುಮತಿಯ ವಿನಾ ಅವನ ಬಳಿ ಶಿಫಾರಸು ಮಾಡುವವನು ಯಾರಿರುವನು? ಅವರ ಮುಂದಿರುವುದನ್ನೂ, ಅವರ ಹಿಂದಿರುವುದನ್ನೂ ಅವನು ಅರಿಯುತ್ತಾನೆ. ಅವನ ಜ್ಞಾನದಿಂದ ಅವನು ಇಚ್ಛಿಸಿರುವುದನ್ನಲ್ಲದೆ (ಬೇರೇನನ್ನೂ) ಸೂಕ್ಷ್ಮವಾಗಿ ಅರಿಯಲು ಅವರಿಗೆ ಸಾಧ್ಯವಿಲ್ಲ. ಅವನ ಕುರ್ಸಿಯು ಆಕಾಶಗಳನ್ನು ಮತ್ತು ಭೂಮಿಯನ್ನು ಆವರಿಸಿಕೊಂಡಿದೆ. ಅವುಗಳ ಸಂರಕ್ಷಣೆಯು ಅವನಿಗೆ ಕಿಂಚಿತ್ತೂ ಭಾರವಿರುವುದಲ್ಲ. ಅವನು ಉನ್ನತನೂ, ಮಹಾನನೂ ಆಗಿರುವನು. [ಸೂರ ಬಕರ:255 ]

• ಅವನು ನಮಗೆ ತಿಳಿಸಿದನು — ಅವನು ಎಲ್ಲಾ ಸಂಪೂರ್ಣ ಗುಣಗಳಿಂದ ಭೂಷಿತನಾಗಿದ್ದಾನೆ. ಅವನು ನಮಗೆ ಬುದ್ಧಿ ಮತ್ತು ಅರಿವು ನೀಡಿದನು, ಇದರಿಂದ ನಾವು ಅವನ ಅದ್ಭುತ ಸೃಷ್ಟಿ ಮತ್ತು ಶಕ್ತಿಯನ್ನು ಅರಿತುಕೊಳ್ಳಬಹುದು ಮತ್ತು ಇದು ನಮಗೆ ಅವನ ಮಹಿಮೆಯನ್ನು, ಶಕ್ತಿಯನ್ನು ಹಾಗು

ಸಂಪೂರ್ಣ ಗುಣಗಳನ್ನು ಅರಿಯಲು ದಾರಿ ಮಾಡಿಕೊಡುತ್ತದೆ. ಮಹೋನ್ನತ ರಬ್ಬ್ ಸಂಪೂರ್ಣನು ಮತ್ತು ಅವನಲ್ಲಿ ಯಾವ ಲೋಪದೋಷವಿಲ್ಲ.

• ಅವನು ನಮಗೆ ತಿಳಿಸಿದನು — ಅವನು ಆಕಾಶಗಳ ಮೇಲಿದ್ದಾನೆ. ಅವನು ಈ ವಿಶ್ವದ ವ್ಯಾಪ್ತಿಯಲ್ಲಿ ಇಲ್ಲ ಮತ್ತು ಈ ವಿಶ್ವವು ಅವನಲ್ಲಿ ಸಮಾವೇಶಗೊಂಡಿಲ್ಲ.

• ಅವನು ನಮಗೆ ತಿಳಿಸಿದನು — ಅವನ ಮುಂದೆ ಶರಣಾಗುವುದು (ತಲೆ ಬಾಗಿಸುವುದು) ನಮ್ಮ ಬಾಧ್ಯತೆಯಾಗಿದೆ. ಅವನೇ ನಮ್ಮ ಮತ್ತು ಈ ಪ್ರಪಂಚದ ಸೃಷ್ಟಿಕರ್ತ ಮತ್ತು ನಿಯಂತ್ರಕ.

ಹೀಗಾಗಿ, ಸೃಷ್ಟಿಕರ್ತನು ಮಹಿಮೆಯ ಗುಣಗಳಿಂದ ಸಂಪನ್ನನು, ಮತ್ತು ಅವನು ಯಾವುದೇ ಅಗತ್ಯ ಹೊಂದಿರಲು ಅಥವಾ ದೋಷದಿಂದ ಕೂಡಿರಲು ಎಂದಿಗೂ ಸಾಧ್ಯವಿಲ್ಲ. ರಬ್ಬ್ ಎಂದಿಗೂ ಮರೆಯುವುದಿಲ್ಲ, ನಿದ್ರಿಸುವುದಿಲ್ಲ, ಆಹಾರ ಸೇವಿಸುವುದಿಲ್ಲ ಮತ್ತು ಅವನಿಗೆ ಹೆಂಡತಿ ಅಥವಾ ಮಕ್ಕಳಿರುವುದಿಲ್ಲ. ಸೃಷ್ಟಿಕರ್ತನ ಮಹಿಮೆಗೆ ವಿರುದ್ಧವಾದ ಸಂದೇಶಗಳೂ ಇದ್ದರೇ, ಅವು ಆ ಸತ್ಯವಾದ ವಹಿ (ದಿವ್ಯ ಸಂದೇಶ)ಯ ಭಾಗವಲ್ಲ, ಅದು ಅವನ ಪ್ರವಾದಿಗಳು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ತಂದ ಸಂದೇಶವಲ್ಲ.

ಸರ್ವಶಕ್ತನಾದ ಅಲ್ಲಾಹು ಪವಿತ್ರ ಕುರ್‌ಆನ್‌ನಲ್ಲಿ

ಹೇಳುತ್ತಾನೆ:

﴿قُلْ هُوَ ٱللَّهُ أَحَدٌ ۝١ ٱللَّهُ ٱلصَّمَدُ ۝٢ لَمْ يَلِدْ وَلَمْ يُولَدْ ۝٣ وَلَمْ يَكُن لَّهُۥ كُفُوًا أَحَدٌۢ ۝٤﴾

(ಓ ಪ್ರವಾದಿಯವರೇ! ) ಹೇಳಿರಿ: 'ಅವನು ಅಲ್ಲಾಹು! ಏಕೈಕನು.

ಅಲ್ಲಾಹು ಸರ್ವರಿಗೂ ಆಶ್ರಯದಾತನಾಗಿರುವನು (ನಿರಪೇಕ್ಷಕನು).

ಅವನು(ಯಾರಿಗೂ) ಜನ್ಮ ನೀಡಿಲ್ಲ,ಅವನು (ಯಾರದೇ ಸಂತತಿಯಾಗಿ ಜನಿಸಿದವನೂ ಅಲ್ಲ.

ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ'. [ಅಲ್-ಇಖ್ಲಾಸ್:1-4]

ಈ ದಿಗಂತ ಮಂಡಲದ ಸೃಷ್ಟಿಕರ್ತ ಮತ್ತು ರಬ್ಬ್ ಅಲ್ಲಾಹುವೆಂದು ನೀವು ವಿಶ್ವಾಸ ಹೊಂದಿದ್ದರೆ.....ನಿಮ್ಮ ಸೃಷ್ಟಿಯ ಉದ್ದೇಶವೇನೆಂಬ ವಿಚಾರದಲ್ಲಿ ಎಂದಾದರೂ ಯೋಚಿಸಿದ್ದೀರಾ? ಅಲ್ಲಾಹು ನಮ್ಮಿಂದ ಬಯಸುವುದೇನು? ನಮ್ಮ ಅಸ್ತಿತ್ವದ ಉದ್ದೇಶವೇನು?

## ಅಲ್ಲಾಹು ನಮ್ಮನ್ನು ಸೃಷ್ಟಿಸಿದ ನಂತರ ನಮಗೆ ಯಾವುದೇ ಉದ್ದೇಶ ಮತ್ತು ಮಾರ್ಗದರ್ಶನವಿಲ್ಲದೆ ಬಿಟ್ಟಿರಲು ಸಾಧ್ಯವೇ?ಅಲ್ಲಾಹು ಈ ಎಲ್ಲಾ ಸೃಷ್ಟಿಗಳನ್ನು ಯಾವುದೇ ಉದ್ದೇಶ ಅಥವಾ ಗುರಿಯಿಲ್ಲದೆ ಸೃಷ್ಟಿಸಿದ್ದಾನೆಯೇ?

ನಿಜವಾದ ವಿಚಾರವೆಂದರೆ, ಮಹಾನ್ ಸೃಷ್ಟಿಕರ್ತ ನಮ್ಮ ರಬ್ಬ್ ಅಲ್ಲಾಹು ನಮಗೆ ನಮ್ಮ ಸೃಷ್ಟಿಯ ಉದ್ದೇಶವನ್ನು ತಿಳಿಸಿದನು.ನಮ್ಮ ಸೃಷ್ಟಿಯ ಉದ್ದೇಶವೇನೆಂದರೆ ಕೇವಲ ಅಲ್ಲಾಹುವಿನ ಇಬಾದತ್ ಮಾಡುವುದು. ಅವನು ನಮ್ಮಿಂದ ಏನು ಬಯಸುತ್ತಾನೆಂಬುದನ್ನು ತಿಳಿಸಿದನು, ಅವನು ಮಾತ್ರ ಆರಾಧನೆಗೆ ಹಕ್ಕುಧಾರ ಎಂದು ಅವನು ತನ್ನ ಪ್ರವಾದಿಗಳ ಮೂಲಕ ನಮಗೆ ತಿಳಿಸಿದನು, ನಾವು ಅವನ ಆರಾಧನೆಯನ್ನು ಹೇಗೆ ಮಾಡಬೇಕು? ಅವನ ಆದೇಶಗಳನ್ನು ಪಾಲಿಸಿ ಮತ್ತು ಅವನ ನಿಷೇಧಗಳನ್ನು ತೊರೆದು ಅವನ ಸಾಮೀಪ್ಯವನ್ನು ಹೇಗೆ ಪಡೆಯಬೇಕು? ಅವನ ಸಂತೃಪ್ತಿಯನ್ನು ಗಳಿಸುವುದು ಮತ್ತು ಅವನು ವಿಧಿಸುವ ಶಿಕ್ಷೆಯಿಂದ ರಕ್ಷಣೆ ಪಡೆಯುವುದು ಹೇಗೆ? ಮರಣಾನಂತರ ನಮ್ಮ ಪರ್ಯಾವಸಾನವೇನು ಎಂಬುದನ್ನೂ ತಿಳಿಸಿಕೊಟ್ಟನು.

ಅವನು ನಮಗೆ ತಿಳಿಸಿದನು — ಈ ಭೌತಿಕ

ಜೀವನವು ಕೇವಲ ಒಂದು ಪರೀಕ್ಷೆಯ ಸ್ಥಳವಾಗಿದೆ. ನಿಜವಾದ ಮತ್ತು ಪೂರ್ಣ ಜೀವನವು ಮರಣಾನಂತರ ದೊರೆಯುವ ಆಖಿರತ್‌ನ ಪಾರತ್ರಿಕ ಜೀವನವಾಗಿದೆ.

ಅವನು ನಮಗೆ ತಿಳಿಸಿದನು — ಯಾರು ಅವನ ಆದೇಶಗಳಂತೆ ಅವನ ಆರಾಧನೆಯನ್ನು ಮಾಡುತ್ತಾನೋ, ಅವನು ನಿಷೇಧಿಸಿದವುಗಳಿಂದ ದೂರವಿರುತ್ತಾನೋ ಅವನಿಗೆ ಈ ಭೂಮಿಯಲ್ಲಿ ಉತ್ತಮ ಜೀವನ ಮತ್ತು ಆಖಿರತ್'ನಲ್ಲಿ ಶಾಶ್ವತ ಅನುಗ್ರಹಗಳು ದೊರೆಯುತ್ತವೆ. ಅದರ ವಿರುದ್ಧವಾಗಿ, ಯಾರು ಅವನಿಗೆ ಅವಿಧೇಯತೆ ತೋರಿಸಿ ಅವನನ್ನು ನಿಷೇಧಿಸುತ್ತಾರೋ ಅವರಿಗೆ ಈ ಇಹಲೋಕದಲ್ಲಿ ದುರದೃಷ್ಟವಿದೆ ಮತ್ತು ಆಖಿರತ್‌ನಲ್ಲಿ ಶಾಶ್ವತ ದಂಡನೆ ಇದೆ.

**ಪ್ರತಿಯೊಬ್ಬ ವ್ಯಕ್ತಿಯು ಮಾಡಿದ ಒಳಿತು ಮತ್ತು ಕೆಡುಕಿಗೆ ಈ ಜೀವನದಲ್ಲಿ ಪ್ರತಿಫಲ ಸಿಗದೆ ನಮಗೆ ಮುಂದೆ ಹೋಗಲು ಸಾಧ್ಯವಿಲ್ಲ ಎಂದು ನಾವು ಚೆನ್ನಾಗಿ ತಿಳಿದಿದ್ದೇವೆ; ಅಕ್ರಮಿಗಳಿಗೆ ಶಿಕ್ಷೆ ಸಿಗದಿರಲು ಧರ್ಮಪಾಲಕರಿಗೆ ಬಹುಮಾನ ಸಿಗದಿರಲು ಸಾಧ್ಯವೇ ಇಲ್ಲ.**

ನಮ್ಮ ರಬ್ಬ್ ನಮಗೆ ತಿಳಿಸಿದ್ದಾನೆ — ಅವನ ಸಂತೃಪ್ತಿ ಪಡೆಯಲು ಮತ್ತು ಅವನ ಶಿಕ್ಷೆಯಿಂದ ಮುಕ್ತಿ ಪಡೆಯಲು ಇಸ್ಲಾಮ್ ಧರ್ಮವನ್ನು

ಸ್ವೀಕರಿಸುವುದು ಅನಿವಾರ್ಯ. ಇಸ್ಲಾಮ್ ಎಂದರೆ ಅಲ್ಲಾಹುವಿನ ಮುಂದೆ ಸಂಪೂರ್ಣ ಶರಣಾಗತನಾಗುವುದು, ಕೇವಲ ಅವನಿಗೇ ಮಾತ್ರ ಆರಾಧನೆಯನ್ನು ಮಾಡುವುದು, ಅವನ ಆದೇಶಗಳಿಗೆ ವಿಧೇಯರಾಗುವುದು ಮತ್ತು ಸಂತೃಪ್ತಿ ಹಾಗೂ ಸ್ವೀಕಾರದೊಂದಿಗೆ ಅವನ ಶರೀಯತ್‌ನ ಅನುಸರಣೆ ಮಾಡುವುದಾಗಿದೆ. ಇಸ್ಲಾಮ್‌ನ ಹೊರತು ಬೇರೆ ಯಾವ ಧರ್ಮವನ್ನೂ ಅವನು ಸ್ವೀಕರಿಸುವುದಿಲ್ಲ. ಸರ್ವಶಕ್ತ ಅಲ್ಲಾಹು ಹೇಳುತ್ತಾನೆ :

﴿وَمَن يَبْتَغِ غَيْرَ ٱلْإِسْلَـٰمِ دِينًا فَلَن يُقْبَلَ مِنْهُ وَهُوَ فِى ٱلْـَٔاخِرَةِ مِنَ ٱلْخَـٰسِرِينَ ﴿٨٥﴾﴾

ಯಾರಾದರೂ ಇಸ್ಲಾಮಿಗೆ ಹೊರತಾಗಿರುವುದನ್ನು ಧರ್ಮವಾಗಿ ಅರಸುವುದಾದರೆ ಅದನ್ನು ಅವನಿಂದ ಎಂದಿಗೂ ಸ್ವೀಕರಿಸಲಾಗದು. ಪರಲೋಕದಲ್ಲಿ ಅವನು ನಷ್ಟ ಹೊಂದಿದವರ ಪೈಕಿ ಸೇರಿದವನಾಗುವನು. [ಆಲಿ ಇಮ್ರಾನ್:85].

ಇಂದು ಬಹುಸಂಖ್ಯಾತರು ಯಾವ್ಯಾವ ವಸ್ತುಗಳನ್ನು ಆರಾಧಿಸುತ್ತಾರೆಂದು ಗಮನಿಸಿದರೆ, ಕೆಲವರು ಮನುಷ್ಯನನ್ನು ಆರಾಧಿಸುತ್ತಾರೆ, ಕೆಲವರು ವಿಗ್ರಹಗಳನ್ನು, ಕೆಲವರು ನಕ್ಷತ್ರಗಳನ್ನು ಮತ್ತು ಕೆಲವರು ಇನ್ನುಬೇರೇನಾದರೂ ವಸ್ತುಗಳಿಗೆ ಆರಾಧನೆಯನ್ನು ಸಲ್ಲಿಸುತ್ತಿದ್ದಾರೆ. ಇದು ಬುದ್ಧಿವಂತ ವ್ಯಕ್ತಿಗೆ ಶೋಭಿಸುವುದಿಲ್ಲ, ಅವನು ಸರ್ವಗುಣ ಸಂಪನ್ನನಾದ, ಬ್ರಹ್ಮಾಂಡದ ಸೃಷ್ಟಿಕರ್ತ, ಪಾಲಕ ಮತ್ತು ನಿಯಂತ್ರಕನಾದ ರಬ್ಬ್ ಅಲ್ಲಾಹುವಿನ

ಹೊರತು ಯಾರನ್ನೂ ಆರಾಧಿಸುವುದಿಲ್ಲ. ತನ್ನಂತೆಯೇ ಅಥವಾ ತನಗಿಂತ ಹೀನನಾದ ಸೃಷ್ಟಿಯ ಆರಾಧನೆ ಹೇಗೆ ಮಾಡಲು ಸಾಧ್ಯ? ಆರಾಧನೆಗೆ ಅರ್ಹನಾಗಿ ಒಬ್ಬ ಮನುಷ್ಯ, ವಿಗ್ರಹ, ಮರ ಅಥವಾ ಪ್ರಾಣಿ ಎಂದಿಗೂ ಆಗಿರಲಾರದು.

ಇಂದು ಜನರು ಇಸ್ಲಾಮನ್ನು ಹೊರತುಪಡಿಸಿ ಬೇರೆ ಬೇರೆ ಧರ್ಮಗಳನ್ನು ನಂಬುತ್ತಿದ್ದಾರೆ. ಆದರೆ ಅಲ್ಲಾಹು ಅವುಗಳ ಪೈಕಿ ಯಾವ ಧರ್ಮವನ್ನೂ ಸ್ವೀಕರಿಸುವುದಿಲ್ಲ. ಏಕೆಂದರೆ ಅವುಗಳಲ್ಲಿ ಮನುಷ್ಯನಿಂದ ರಚಿಸಲ್ಪಟ್ಟ ಧರ್ಮಗಳಾಗಿವೆ ಅಥವಾ ಮೊದಲಿಗೆ ಅವು ಆಕಾಶದಿಂದ ಇಳಿಸಲಾದ ಧರ್ಮಗಳಾಗಿದ್ದರೂ, ಕಾಲಕ್ರಮೇಣ ಮನುಷ್ಯನು ಅವುಗಳಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಿ ಅವುಗಳನ್ನು ವಿಕೃತಗೊಳಿಸಿದ್ದಾನೆ. ಆದರೆ ಇಸ್ಲಾಂ ಈ ಬ್ರಹ್ಮಾಂಡದ ಸೃಷ್ಟಿಕರ್ತನ ಧರ್ಮವಾಗಿದೆ, ಇದು ಯಾವತ್ತೂ ಬದಲಾಗಲಾರದು. ಈ ಧರ್ಮದ ಮೂಲ ಗ್ರಂಥವು ಪವಿತ್ರ ಕುರ್‌ಆನ್ ಆಗಿದ್ದು, ಅದು ಇಂದಿಗೂ ಮುಸ್ಲಿಮರ ಬಳಿ ಅಂತಿಮ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ರವರ ಮೇಲೆ ಅವತೀರ್ಣಗೊಂಡ ಮೂಲ ಭಾಷೆಯಲ್ಲೇ – ಅಂದರೆ ಅರಬಿಯಲ್ಲಿ – ಸಂಪೂರ್ಣವಾಗಿ ಸುರಕ್ಷಿತವಾಗಿ ಉಳಿದಿದೆ.

ಇಸ್ಲಾಮಿನ ಒಂದು ಮೂಲ ತತ್ವವೆಂದರೆ, ಅಲ್ಲಾಹು ಕಳುಹಿಸಿದ ಎಲ್ಲಾ ಪ್ರವಾದಿಗಳ ಮೇಲೂ

ಇಮಾನ್ (ವಿಶ್ವಾಸ) ಇಡಬೇಕಾಗಿದೆ. ವಾಸ್ತವದಲ್ಲಿ ಎಲ್ಲಾ ಪ್ರವಾದಿಗಳು ಮಾನವರೇ ಆಗಿದ್ದರು ಮತ್ತು ಅಲ್ಲಾಹು ಸತ್ಯದ ಪರವಾಗಿ ಅವರನ್ನು ಬೆಂಬಲಿಸಲು ವಿವಿಧ ದೃಷ್ಟಾಂತ ಮತ್ತು ಪವಾಡಗಳ ಮೂಲಕ ಅವರಿಗೆ ಸಹಾಯ ಮಾಡಿದನು. ಅವನು ಅವರನ್ನುಅಲ್ಲಾಹುವಿಗೆ ಮಾತ್ರ ಆರಾಧನೆ ಸಲ್ಲಿಸಲು ಅವನೊಂದಿಗೆ ಯಾರನ್ನೂ ಸಹಭಾಗಿಯಾಗಿ ನಿಶ್ಚಯಿಸದಿರಲು ಕರೆ ನೀಡಲಿಕ್ಕಾಗಿ ಮಾತ್ರ ನಿಯೋಜಿಸಿದ್ದಾನೆ. ಕೊನೆಯ ಪ್ರವಾದಿ ಮುಹಮ್ಮದ್ (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಆಗಿದ್ದಾರೆ. ಅಲ್ಲಾಹು ಅವರನ್ನು ಅಂತಿಮ ದಿವ್ಯ ಧರ್ಮ ಶಾಸನ (ಶರೀಯತ್) ಜೊತೆಗೆ ಕಳುಹಿಸಿದನು, ಇದರಿಂದ ಹಿಂದಿನ ಎಲ್ಲಾ ಧರ್ಮ ಶಾಸನಗಳು ರದ್ದುಗೊಳಿಸಲ್ಪಟ್ಟವು. ಅಲ್ಲಾಹು ಅವರಿಗೆ ಮಹತ್ವಪೂರ್ಣ ಚಿಹ್ನೆಗಳ ಮೂಲಕ ಬೆಂಬಲಿಸಿದನು. ಅವುಗಳಲ್ಲಿ ಎಲ್ಲದಕ್ಕಿಂತ ದೊಡ್ಡ ಚಿಹ್ನೆ ಪವಿತ್ರ ಕುರ್‌ಆನ್ ಆಗಿದೆ. ಪವಿತ್ರ ಕುರ್'ಆನ್ ಈ ಬ್ರಹ್ಮಾಂಡದ ಸೃಷ್ಟಿಕರ್ತನ ವಾಣಿಯಾಗಿದೆ. ಇದು ಮಾನವ ಸಮಾಜಕ್ಕೆ ದೊರೆಯುವ ಅತ್ಯಂತ ಮಹಾನ್ ಗ್ರಂಥವಾಗಿದೆ. ಅದರ ವಿಷಯ, ಪದಗಳು, ಕ್ರಮ ಮತ್ತು ಆದೇಶಗಳಲ್ಲಿ ಅದು ಒಂದು ಚಮತ್ಕಾರವಾಗಿದೆ. ಇದರಲ್ಲಿ ಸತ್ಯವಾದ ಮಾರ್ಗವನ್ನು ವಿವರಿಸಲಾಗಿದೆ. ಅದು ಪ್ರಪಂಚ ಮತ್ತು ಪರಲೋಕದ ಕಲ್ಯಾಣಕ್ಕೆ ಮಾರ್ಗದರ್ಶನ ನೀಡುತ್ತದೆ. ಈ ಕುರ್'ಆನ್ ಅರಬಿ

ಭಾಷೆಯಲ್ಲಿ ಇಳಿಸಲ್ಪಟ್ಟಿದೆ.

ಈ ವಿಚಾರದಲ್ಲಿ ಅನೇಕ ತಾರ್ಕಿಕ ಮತ್ತು ವೈಜ್ಞಾನಿಕ ಪ್ರಮಾಣಗಳು ಇವೆ, ಕುರ್'ಆನ್ ಈ ಲೋಕದ ಪವಿತ್ರ ಮತ್ತು ಸರ್ವಶಕ್ತ ಸೃಷ್ಟಿಕರ್ತನ ವಾಣಿ ಎಂದು ಯಾವುದೇ ಸಂದೇಹವಿಲ್ಲದೆ ಸಾಬೀತಾಗುತ್ತದೆ. ಈ ರೀತಿಯ ಗ್ರಂಥವನ್ನು ಯಾವುದೇ ಮಾನವನಿಂದ ಬರೆಯಲಾಗದು ಮತ್ತು ಇದು ಮಾನವ ನಿರ್ಮಿತ ಗ್ರಂಥವಾಗಲೂ ಸಾಧ್ಯವಿಲ್ಲ.

ಇಸ್ಲಾಂನ ಮೂಲ ತತ್ವಗಳಲ್ಲಿ ಮಲಾಯಿಕರನ್ನು ನಂಬುವುದು, ಅಂತಿಮ ದಿನವನ್ನು ನಂಬುವುದು ಮತ್ತು ಆ ದಿನ ಅಲ್ಲಾಹು ಜನರನ್ನು ಸಮಾಧಿಗಳಿಂದ ಎಬ್ಬಿಸಿ ಅವರ ಕರ್ಮಗಳಿಗನುಗುಣವಾಗಿ ವಿಚಾರಣೆ ನಡೆಸುವನು ಇತ್ಯಾದಿಗಳು ಸೇರಿವೆ. ಸತ್ಯವಿಶ್ವಾಸಿಯಾಗಿರುವ ಸ್ಥಿತಿಯಲ್ಲಿ ಸತ್ಕರ್ಮಗಳನ್ನು ಮಾಡಿದವರಿಗೆ ಸ್ವರ್ಗದಲ್ಲಿ ಶಾಶ್ವತ ಸುಖವಿದೆ. ಅವಿಶ್ವಾಸ ಹೊಂದಿ ದುಷ್ಕರ್ಮಗಳನ್ನು ಮಾಡಿದವರಿಗೆ ನರಕದಲ್ಲಿ ಶಾಶ್ವತ ಶಿಕ್ಷೆಯಿದೆ. ಇಸ್ಲಾಂನ ಮೂಲ ತತ್ವಗಳಲ್ಲಿ ಅಲ್ಲಾಹು ವಿಧಿಸಿದ ಒಳಿತು ಮತ್ತು ಕೆಡುಕನ್ನು ನಂಬುವುದು ಸೇರಿದೆ.

ಇಸ್ಲಾಂ ಧರ್ಮವು ವಾಸ್ತವದಲ್ಲಿ ಪೂರ್ಣವಾದ ಜೀವನ ನಿಯಮವಾಗಿದೆ, ಇದು ಶುದ್ಧ ಪ್ರಕೃತಿ ಮತ್ತು ತಾರ್ಕಿಕತೆಗೂ ಅನುಗುಣವಾಗಿದೆ ಮತ್ತು ಇದು ಶುದ್ಧ ಪ್ರಕೃತಿಯ ಮನಸ್ಸುಗಳು ಒಪ್ಪಿಕೊಳ್ಳುವಂತಹದ್ದಾಗಿದೆ. ಈ ವಿಶಾಲ

ನಿಯಮವನ್ನು ಸರ್ವಶಕ್ತ ಸೃಷ್ಟಿಕರ್ತನು ತನ್ನ ಸೃಷ್ಟಿಗಳಿಗೆ ನಿಯಮವಾಗಿ ನಿಶ್ಚಯಿಸಿದ್ದಾನೆ. ಇದು ಪ್ರಪಂಚ ಮತ್ತು ಪರಲೋಕದಲ್ಲಿ ಎಲ್ಲ ಜನರಿಗೂ ಒಳಿತು ಮತ್ತು ಸಂತೋಷವನ್ನು ನೀಡುವ ಧರ್ಮವಾಗಿದೆ. ಇದು ಜನಾಂಗಗಳ ಆಧಾರದಲ್ಲಾಗಲಿ ವರ್ಣಗಳ ಆಧಾರದಲ್ಲಾಗಲಿ ಬೇಧಭಾವ ಮಾಡುವುದಿಲ್ಲ. ಇಲ್ಲಿ ಎಲ್ಲಾ ಜನರೂ ಸಮಾನರಾಗಿದ್ದಾರೆ. ಇಸ್ಲಾಮ್'ನಲ್ಲಿ ಯಾವೊಬ್ಬನೂ ಅವನ ಸತ್ಕರ್ಮಗಳ ಆಧಾರದಲ್ಲೇ ಹೊರತು ಇನ್ನೊಬ್ಬನಿಗಿಂತ ವಿಭಿನ್ನನಾಗುವುದಿಲ್ಲ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿مَنۡ عَمِلَ صَٰلِحٗا مِّن ذَكَرٍ أَوۡ أُنثَىٰ وَهُوَ مُؤۡمِنٞ فَلَنُحۡيِيَنَّهُۥ حَيَوٰةٗ طَيِّبَةٗۖ وَلَنَجۡزِيَنَّهُمۡ أَجۡرَهُم بِأَحۡسَنِ مَا كَانُواْ يَعۡمَلُونَ ٩٧﴾

"ಗಂಡಾಗಲಿ, ಹೆಣ್ಣಾಗಲಿ ಸತ್ಯವಿಶ್ವಾಸಿಯಾಗಿರುತ್ತಾ ಯಾರು ಸತ್ಕರ್ಮಗಳನ್ನು ಮಾಡುವರೋ ಖಂಡಿತವಾಗಿಯೂ ನಾವು ಆ ವ್ಯಕ್ತಿಗೆ ಉತ್ತಮವಾದ ಬದುಕನ್ನು ನೀಡುವೆವು. ಅವರು ಮಾಡುತ್ತಿರುವ ಕರ್ಮಗಳಲ್ಲಿ ಅತ್ಯುತ್ತಮವಾಗಿರುವುದಕ್ಕೆ ಅನುಗುಣವಾಗಿ ನಾವು ಅವರಿಗಿರುವ ಪ್ರತಿಫಲವನ್ನು ನೀಡುವೆವು." [ಅನ್ನಹ್ಲ್: 97].

ಅಲ್ಲಾಹುವನ್ನು ರಬ್ಬ್ ಮತ್ತು ಆರಾಧನೆಗೆ ಅರ್ಹನೆಂದು ವಿಶ್ವಾಸವಿರಿಸುವುದು. ಇಸ್ಲಾಮನ್ನು ಧರ್ಮವಾಗಿಯೂ, ಮುಹಮ್ಮದ್ ﷺ ಅವರನ್ನು

ಪ್ರವಾದಿಯಾಗಿಯೂ ಅಂಗೀಕರಿಸುವುದನ್ನು ಅಲ್ಲಾಹು ಪವಿತ್ರ ಕುರ್‌ಆನ್‌ನಲ್ಲಿ ಬಹಳ ದೃಢವಾಗಿ ಹೇಳುತ್ತಾನೆ. ಇಸ್ಲಾಮ್‌ಗೆ ಸೇರುವುದು ಪ್ರತಿ ವ್ಯಕ್ತಿಯ ಮೇಲೆ ಅಗತ್ಯವಾಗಿದೆ. ಮಾನವನಿಗೆ ಇಲ್ಲಿ ಆಯ್ಕೆಗಳಿಲ್ಲ. ಕಿಯಾಮತ್ ದಿನವು ವಿಚಾರಣೆ ಮತ್ತು ಪ್ರತಿಫಲದ ದಿನವಾಗಿದ್ದು, ಯಾರು ಸತ್ಯಸಂಧನಾದ ವಿಶ್ವಾಸಿಯಾಗಿರುವನೋ ಅವನು ದೊಡ್ಡ ಯಶಸ್ಸು ಮತ್ತು ಜಯವನ್ನು ಪಡೆಯುತ್ತಾನೆ. ಯಾರು ಅವಿಶ್ವಾಸಿಯಾಗಿರುತ್ತಾನೋ ಅವನಿಗೆ ಸ್ಪಷ್ಟರೂಪದ ನಷ್ಟವು ಲಭ್ಯವಾಗಲಿದೆ.

ಸರ್ವಶಕ್ತನಾದ ಅಲ್ಲಾಹು ಹೇಳುತ್ತಾನೆ:

﴿...وَمَن يُطِعِ ٱللَّهَ وَرَسُولَهُۥ يُدْخِلْهُ جَنَّٰتٍ تَجْرِى مِن تَحْتِهَا ٱلْأَنْهَٰرُ خَٰلِدِينَ فِيهَا ۚ وَذَٰلِكَ ٱلْفَوْزُ ٱلْعَظِيمُ ﴿١٣﴾ وَمَن يَعْصِ ٱللَّهَ وَرَسُولَهُۥ وَيَتَعَدَّ حُدُودَهُۥ يُدْخِلْهُ نَارًا خَٰلِدًا فِيهَا وَلَهُۥ عَذَابٌ مُّهِينٌ ﴿١٤﴾﴾

ಯಾರು ಅಲ್ಲಾಹುವನ್ನು ಮತ್ತು ಅವನ ಸಂದೇಶವಾಹಕರನ್ನು ಅನುಸರಿಸುವರೋ ಅವರನ್ನು ಅಲ್ಲಾಹು ತಳಭಾಗದಿಂದ ನದಿಗಳು ಹರಿಯುವ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಮಾಡಿಸುವನು. ಅವರು ಅದರಲ್ಲಿ ಶಾಶ್ವತವಾಗಿ ವಾಸಿಸುವರು. ಅದು ಮಹಾ ವಿಜಯವಾಗಿದೆ.

ಯಾರು ಅಲ್ಲಾಹುವಿಗೆ ಮತ್ತು ಅವನ ಸಂದೇಶವಾಹಕರಿಗೆ ಅವಿಧೇಯತೆ ತೋರುವರೋ ಮತ್ತು ಅವನ (ನಿಯಮ) ವ್ಯಾಪ್ತಿಗಳನ್ನು

ಮೀರುವರೋ ಅವರನ್ನು ಅಲ್ಲಾಹು ನರಕಾಗ್ನಿಗೆ ಪ್ರವೇಶ ಮಾಡಿಸುವನು. ಅವನು ಅದರಲ್ಲಿ ಶಾಶ್ವತವಾಗಿ ವಾಸಿಸುವನು.ಅವನಿಗೆ ಅಪಮಾನಕರವಾದ ಶಿಕ್ಷೆಯಿದೆ. [ಅನ್ನಿಸಾ:13-14]

ಯಾರು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಇಚ್ಛಿಸುತ್ತಾರೋ, ಅವನು ಕೆಳಗಿನ ಪದಗಳನ್ನು ಅವುಗಳ ಅರ್ಥಸಮೇತ ಅವುಗಳ ಮೇಲೆ ವಿಶ್ವಾಸ ತಾಳಿ ಉಚ್ಛರಿಸಬೇಕು:(ಅಶ್ಹದು ಅನ್‌ಲಾ ಇಲಾಹ ಇಲ್ಲಲ್ಲಾಹು ವ ಅಶ್ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್).

ಇದನ್ನು ಹೇಳಿದರೆ ಆತ ಮುಸ್ಲಿಮ್ ಆಗುತ್ತಾನೆ. ನಂತರ ಅಲ್ಲಾಹು ನಿಶ್ಚಯಿಸಿದ ಇತರ ಇಸ್ಲಾಮೀ ನಿಯಮಗಳನ್ನು ಆತ ಕ್ರಮೇಣ ಸ್ವಲ್ಪ ಸ್ವಲ್ಪವಾಗಿ ಕಲಿಯಬೇಕು, ಹೀಗೆ ಅಲ್ಲಾಹು ಅವನ ಮೇಲೆ ನಿಶ್ಚಯಿಸಿದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ: https://byenah.com/kn

❋❋❋

# ಪರಿವಿಡಿ


ಇಸ್ಲಾಮ್ ........................................................................................2

ಸಹಜ, ತಾರ್ಕಿಕ ಮತ್ತು ನೈಸರ್ಗಿಕ ಧರ್ಮ...............................2

ನಿಮ್ಮನ್ನು ಸೃಷ್ಟಿಸಿದವರು ಯಾರು? ...........................................2

ಅಲ್ಲಾಹು ನಮ್ಮನ್ನು ಸೃಷ್ಟಿಸಿದ ನಂತರ ನಮಗೆ ಯಾವುದೇ ಉದ್ದೇಶ ಮತ್ತು ಮಾರ್ಗದರ್ಶನವಿಲ್ಲದೆ ಬಿಟ್ಟಿರಲು ಸಾಧ್ಯವೇ?ಅಲ್ಲಾಹು ಈ ಎಲ್ಲಾ ಸೃಷ್ಟಿಗಳನ್ನು ಯಾವುದೇ ಉದ್ದೇಶ ಅಥವಾ ಗುರಿಯಿಲ್ಲದೆ ಸೃಷ್ಟಿಸಿದ್ದಾನೆಯೇ? ....................8

ಪ್ರತಿಯೊಬ್ಬ ವ್ಯಕ್ತಿಯು ಮಾಡಿದ ಒಳಿತು ಮತ್ತು ಕೆಡುಕಿಗೆ ಈ ಜೀವನದಲ್ಲಿ ಪ್ರತಿಫಲ ಸಿಗದೆ ನಮಗೆ ಮುಂದೆ ಹೋಗಲು ಸಾಧ್ಯವಿಲ್ಲ ಎಂದು ನಾವು ಚೆನ್ನಾಗಿ ತಿಳಿದಿದ್ದೇವೆ; ಅಕ್ರಮಿಗಳಿಗೆ ಶಿಕ್ಷೆ ಸಿಗದಿರಲು ಧರ್ಮಪಾಲಕರಿಗೆ ಬಹುಮಾನ ಸಿಗದಿರಲು ಸಾಧ್ಯವೇ ಇಲ್ಲ. ........................................................................................9


❊❊❊


kn368v1.0 - 24/04/2026

جمعية خدمة المحتوى
الإسلامي باللغات